ಈ ದಿನ ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಎಂ ಟಿಎಸ್ ವಕೀಲರಿಂದಃ**

6. 1991 ನೇ ಸಾಲಿನಲ್ಲಿ ವಿಜಯಲಕ್ಷ್ಮಿ ರವರಿಂದ ಸರ್ವೆ ನಂಬರ್ 5ರ 2 ಎಕರೆ ಜಮೀನನ್ನು ಖರೀದಿಸಿರುತ್ತೇನೆ. ಸದರಿ ಆಸ್ತಿಯನ್ನು ವಿಜಯಲಕ್ಷ್ಮಿ ಹಾಲಪ್ಪ ಬಿನ್ವೀರಪ್ಪ ರವರಿಂದ ಖರೀದಿಸಿರುತ್ತಾರೆ. ವಿಜಯಲಕ್ಷ್ಮಿ ಆಸ್ತಿಯನ್ನು ಖರೀದಿಸಿ ಸದರಿ ಆಸ್ತಿಯಲ್ಲಿ ಎಷ್ಟು ವರ್ಷಗಳ ಕಾಲ ಅನುಭವದಲ್ಲಿ ಇದ್ದರೆಂದು ನನ್ನ ತಂದೆಗೆ ತಿಳಿದಿರುತ್ತದೆ. ವಿಜಯಲಕ್ಷ್ಮಿ ಅಥವಾ ಹಾಲಪ್ಪ ನಕಾಶೆ ಕಂಡ ದಾರಿಯನ್ನು ಕೇಳಿರುವುದಿಲ್ಲ ಎಂದರೆ ಸರಿ. ನಕಾಶೆ ಕಂಡ ದಾರಿಗಾಗಿ ತಕರಾರನ್ನು ನಾನೇ ಶುರು ಮಾಡಿರುವುದು ಎಂದರೆ ಸರಿ. ಚಿರಡೋಣಿಯಿಂದ ದೊಡ್ಡಘಟ್ಟಕ್ಕೆ 1976 ನೇ ಸಾಲಿನಲ್ಲಿ ರಸ್ತೆ ಆಗಿರುತ್ತದೆ. ಸದರಿ ರಸ್ತೆಯಲ್ಲಿ ವಿಜಯಲಕ್ಷ್ಮಿ ಹಾಗೂ ಹಾಲಪ್ಪನವರು ಸಂಚರಿಸುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ವಿಜಯಲಕ್ಷ್ಮಿ ಹಾಗೂ ಹಾಲಪ್ಪ ನಕಾಶೆ ಕಂಡ ದಾರಿಯನ್ನು ಬಿಟ್ಟುಕೊಡುವಂತೆ ಕೇಳಿರುವುದಿಲ್ಲ ಎಂದರೆ ಸರಿ. ದಿನಾಂಕಃ 17.01.2018 ರಂದು ಸರ್ವೆಯರ್ ಬಂದು ಸರ್ವೆ ಮಾಡಿ ನಕಾಶೆ ತಯಾರು ಮಾಡಿದನಂತರ ನಕಾಶೆ ಕಂಡ ದಾರಿಗಾಗಿ ತಕರಾರು ಶುರು ಆಗಿರುತ್ತದೆ ಎಂದರೆ ಸರಿ. ದಿನಾಂಕಃ 21.01.2018 ರಂದು ಜೆ ಸಿ ಬಿ ಯನ್ನು ತೆಗೆದುಕೊಂಡು ಬಂದು ದಾವಾ ಆಸ್ತಿಯಲ್ಲಿ ರಸ್ತೆ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ.

7. ಸದರಿ ಸಮಯದಲ್ಲಿ ವಾದಿಗಳು ತಕಾರಾರನ್ನು ಮಾಡಿದಾಗ ಬಸವಾಪಟ್ಟಣ ಪೋಲೀಸ್ ಠಾಣೆಯಿಂದ ಪೋಲೀಸರನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿಃ 17.01.2018 ರಂದೇ ಪೋಲೀಸರೇ ಬಂದಿರುತ್ತಾರೆ ಎಂದ ನುಡಿದಿರುತ್ತಾರೆ. ನಾವು ಪೆದೇ ಪದೇ ತಕರಾರನ್ನು ಮಾಡಿದ ನಿಮಿತ್ತ ವಾದಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳ ಸ್ವಾಧೀನ ಅನುಭವ ಈಗಲೂ ಇದೆ ಎಂದರೆ ಸರಿ. ಹಾಗಾಗಿ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ದಾರಿಯ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.